ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ನ್ಯಾಯಾಲಯ, ಸಿರುಗುಪ್ಪ

ಸಿಸಿ.ನಂ.**281/2020**

ಪಿರ್ಯಾದಿಃ ಸರಕಾರ ಪರಃ ಸಿರುಗುಪ್ಪ ಪೊಲೀಸ್ ಠಾಣೆ , ಸಿರುಗುಪ್ಪ

ವಿರುದ್ಧ

ಆರೋಪಿ**-2**

ಮುದುಕಪ್ಪ ಬಿನ್ ಬಸಲಿಂಗಪ್ಪ, ವಯಸ್ಸುಃ 38 ವರ್ಷ, ವಾಸಃ
ಪೊಪ್ಪನಾಳ್ ಗ್ರಾಮ, ಸಿರುಗುಪ್ಪ ತಾ, ಬಳ್ಳಾರಿ ಜಿಲ್ಲೆ.

ಆರೋಪಣೆ

ದಿನಾಂಕ 13-03-2020 ರಂದು ಸಂಜೆ 5.15 ಗಂಟೆ ಸುಮಾರಿಗೆ ಸಿರುಗುಪ್ಪ ಪೊಲೀಸ್ ಠಾಣಾ ಸರಹದ್ದಿನಲ್ಲಿ ಬರುವ ಸಿರುಗುಪ್ಪ ಪಟ್ಟಣದ ಚೈತನ್ಯ ಲಾಡ್ಜ್ ಮುಂದಿನ ಸಾರ್ವಜನಿಕ ಸ್ಥಳದಲ್ಲಿ 2 ನೇ ಆರೋಪಿಯಾದ ನೀವು ನಸೀಬಿನ ಮಟಕಾ ಜೂಜಾಟದಲ್ಲಿ ತೊಡಗಿ ಸಾರ್ವಜನಿಕರಿಗೆ ಹಣದ ಆಸೆ ಹುಟ್ಟುವಂತೆ ಇದು ಮಟಕಾ ನಸೀಬಿನ ಜೂಜಾಟ, ಒಂದು ರೂಪಾಯಿ ನಂಬರ್ ಗೆ ಹಣಕಟ್ಟಿ ಆಡಿದರೆ ಅದೇ ನಂಬರ್ ತಗುಲಿದರೆ ರೂ.80/- ಕೊಡುವುದಾಗಿ ಜನರನ್ನು ಪುಸಲಾಯಿಸಿ ಕರೆಯುತ್ತಾ, ಸಾರ್ವಜನಿಕರಿಂದ ಹಣವನ್ನು ಪಡೆದು ಬದಲಾಗಿ ಚೀಟಿಗಳನ್ನು ಬರೆದುಕೊಡುತ್ತಿದ್ದಾಗ ಸಾಕ್ಷಿ-1 ರವರು ಸಾಕ್ಷಿ-2 ರಿಂದ 7 ರವರ ಸಮಕ್ಷಮದಲ್ಲಿ ದಾಳಿ ಮಾಡಿದಾಗ ಆತನು ಸಿಕ್ಕಿಬಿದ್ದಿದ್ದು, ವಿಚಾರಿಸಲು ತಾನು ಬರೆದ ಮಟ್ಕಾ ಪಟ್ಟಿಯನ್ನು ಮತ್ತು ಹಣವನ್ನು ನಿಮಗೆ ಕೊಡುವುದಾಗಿ ತಿಳಿಸಿದ್ದು ಆ ಮೂಲಕ ಆರೋಪಿಯಾದ ನೀವು ಕಲಂ.78(3) ಕರ್ನಾಟಕ ಪೊಲೀಸ್ ಅಧಿನಿಯಮ ಅಡಿಯಲ್ಲಿ ಶಿಕ್ಷಾರ್ಷ ಅಪರಾಧವನ್ನು ನನ್ನ ನ್ಯಾಯಿಕ ವ್ಯಾಪ್ತಿಯಲ್ಲಿ ಮಾಡಿದ್ದೀರಿ. ಆ ಮೂಲಕ ಆರೋಪಿಯಾದ ನೀವು ಕಲಂ.78(3) ಕರ್ನಾಟಕ ಪೊಲೀಸ್ ಅಧಿನಿಯಮ ಅಡಿಯಲ್ಲಿ ಶಿಕ್ಷಾರ್ಷ ಅಪರಾಧವನ್ನು ನನ್ನ ನ್ಯಾಯಿಕ ವ್ಯಾಪ್ತಿಯಲ್ಲಿ ಮಾಡಿದ್ದೀರಿ.

ಆದುದರಿಂದ ಈ ಆರೋಪಣೆಯನ್ನು ನಿಮ್ಮ ಪಮೇಲಿಟ್ಟಿದ್ದು, ಅದರ ವಿಚಾರಣೆಯು ನಿಮ್ಮ ಮೇಲೆ ನಡೆಯತಕ್ಕದ್ದೆಂದು ಈ ಮೂಲಕ ಆದೇಶಿಸುತ್ತೇನೆ.

ಪ್ರ.ದ.ನ್ಯಾ.ದಂ., ಸಿರುಗುಪ್ಪ

## ಆಪಾದನೆ ಹೇಳಿಕೆ

ಪ್ರಶ್ನೆ ಇದೀಗ ನಿಮಗೆ ಓದಿ ಹೇಳಿದ ಆರೋಪಣೆ ತಿಳಿಯಿತೇ ?

ಆರೋಪಿ-2 ಉತ್ತರಃ

ಪ್ರಶ್ನೆ ನೀವು ತಪ್ಪೊಪ್ಪಿಕೊಳ್ಳುತ್ತೀರಾ ? ಅಥವಾ ನಿಮ್ಮ ಪರ ಪ್ರತಿರಕ್ಷಣೆ ಏನಾದರೂ ಇದೆಯೇ ? ವಿಚಾರಣೆ ಆಗಬೇಕೇ ?

ಆರೋಪಿ-2 ಉತ್ತರಃ

(ಮೇಲಿನ ಆರೋಪಣೆ ಸಾರವನ್ನು ಆರೋಪಿ-2 ರವರಿಗೆ ಇಂದು ಮುಕ್ತ ನ್ಯಾಯಾಲಯದಲ್ಲಿ ಓದಿ ವಿವರಿಸಿ ಹೇಳಿದ್ದು ಅದನ್ನು ಅವರು ಸರಿಯಾಗಿ ಅರ್ಥ ಮಾಡಿಕೊಂಡು ನೀಡಿದ ಯಾಥಾವತ್ ಹೇಳಿಕೆಯನ್ನು ಬರೆದು ದೃಢೀಕರಿಸಲಾಯಿತು).

ದಿನಾಂಕಃ **26-05-2025** ಪ್ರ.ದ.ನ್ಯಾ.ದಂ.,ಸಿರುಗುಪ್ಪ.